ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ತಿದ್ದುಪಡಿಗಳೊಂದಿಗೆ ಅನುಮೋದನೆ ದೊರಕಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ತಿದ್ದುಪಡಿಗಳೊಂದಿಗೆ ಒಪ್ಪಿಗೆ ನೀಡಲಾಯಿತು)

(ಅನುಬಂಧ–12)

10. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕ, 2012

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು) :– ಮಾನ್ಯ ಅಧ್ಯಕ್ಷರೆ, 2012ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ವಿನಂತಿಸುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : Explain ಮಾಡಿಬಿಡಿ.

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು) :– ಮಾನ್ಯ ಅಧ್ಯಕ್ಷರೆ, ಈಗಾಗಲೇ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಕೌನ್ಸಿಲಿಂಗ್ ವ್ಯವಸ್ಥೆ ಇದೆ. ಹಾಗೆಯೇ ಕಾಲೇಜು ಶಿಕ್ಷಣಕ್ಕೂ ಕೌನ್ಸಿಲಿಂಗ್ ವ್ಯವಸ್ಥೆಯನ್ನು ತರುತ್ತಿದ್ದೇವೆ. ಇದರಲ್ಲಿ ಎ,ಬಿ.ಸಿ. ಮೂರು ವಲಯಗಳನ್ನು ಮಾಡಿದ್ದೇವೆ. ಹೊಸದಾಗಿ appoint ಆದವರು 'ಸಿ' ವಲಯಕ್ಕೆ ಹೋಗಬೇಕು. 'ಸಿ' ವಲಯ ಎಂದರೆ ಗ್ರಾಮಾಂತರ ಪ್ರದೇಶ. 'ಬಿ' ವಲಯ ಎಂದರೆ ತಾಲ್ಲೂಕು headquarters ಪುರಸಭೆ. 'ಎ' ವಲಯ ಎಂದರೆ ಕಾರ್ಪೋರೇಷನ್

District headquarters, ಆ ವಲಯವಾರು ಎಲ್ಲಾ ಕಾಲೇಜುಗಳಿಗೂ ಕೂಡ ಶಿಕ್ಷಕರು ಸಿಗುವಂತಾಗಬೇಕು. ಯಾವುದೇ ವರ್ಗಾವಣೆ ದಂಧೆಗೆ ಅವಕಾಶವಿರಬಾರದು. ಒಂದು ಪಾರದರ್ಶಕವಾದಂಥ ವರ್ಗಾವಣೆ ನೀತಿಯಿರಬೇಕು ಎಂದು ಹೇಳಿ ಇದನ್ನು ಸಭೆಯ ಮುಂದೆ ಇಟ್ಟಿದ್ದೇವೆ.

ಶ್ರೀ ಕೆ.ಜಿ. ಕುಮಾರಸ್ವಾಮಿ : ಅವರು ಯಾವುದೋ ಊರಿನಲ್ಲಿರುತ್ತಾರೆ. ಇವರು ಯಾವುದೋ ಊರಿನಲ್ಲಿರುತ್ತಾರೆ, ಈಗೇನು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಕ್ಕೆ ಕೌನ್ಸಿಲಿಂಗ್ ತಂದಿದ್ದಾರೆ ಮತ್ತು ಆರೋಗ್ಯ ಇಲಾಖೆಗೆ ತಂದಿದ್ದಾರೆ. ಇದರಿಂದ ಸಾಮಾನ್ಯ ಜನರಿಗೆ ತೊಂದರೆಯಾಗುತ್ತದೆ. ಯಾರ್ಯಾರು ಶಿಕ್ಷಕರು ಇದ್ದಾರೆ, ಅವರು ಯಾವುದೋ ಒಂದೇ ಊರಿನಲ್ಲಿ ಕುಳಿತುಕೊಂಡು ಹತ್ತಾರು ವರ್ಷಗಳ ಕಾಲ ಕೆಲಸ ಮಾಡುತ್ತಿರುತ್ತಾರೆ. ಅಲ್ಲಿ ಶಾಲೆಗೆ ಪಾಠ ಮಾಡುವುದು ಬಿಟ್ಟು ಬೇರೆ ಬೇರೆ ಬಡ್ಡಿ ವ್ಯವಹಾರ, ಬೇರೆ ಬೇರೆ ವ್ಯವಹಾರಗಳಲ್ಲಿ ತೊಡಗಿರುತ್ತಾರೆ. ಆದ್ದರಿಂದ ದಯಮಾಡಿ ಈ ವಿಧೇಯಕವನ್ನು ತರಬಾರದು ಎಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು) : ಪತಿ ಪತ್ನಿ ಪ್ರಕರಣ ಇದ್ದಾಗ, ತೀವ್ರವಾದಂಥ ಆರೋಗ್ಯದ ಸಮಸ್ಯೆ ಇದ್ದಾಗ ಅದಕ್ಕೂ ಕೂಡ ಆದ್ಯತೆ ಕೊಡುತ್ತೇವೆ. ಈ ಒಂದು ಕೋಟಾ ನಿಗದಿ ಮಾಡಿ, ಆ ಕೋಟಾದೊಳಗೆ ಆದ್ಯತೆಯನ್ನು ಕೊಟ್ಟಿದ್ದೇವೆ. ಪತಿ ಪತ್ನಿ ಪ್ರಕರಣ ಮತ್ತು ತೀವ್ರವಾದಂಥ ಆರೋಗ್ಯ ಸಮಸ್ಯೆ. ಹಾಗಾಗಿ ಅವರಿಗೂ ಕೂಡ ಆದ್ಯತೆ ಕೊಟ್ಟಿರುವುದರಿಂದ ಅದಕ್ಕೆ ಸಹಾಯವಾಗುತ್ತದೆ.

ಶ್ರೀ ಕೆ.ಎಂ. ವಿರೂಪಾಕ್ಷಪ್ಪ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಕೌನ್ಸಿಲಿಂಗ್ ಸಿಸ್ಟಮ್ ಬೇಡ, ಎಲ್ಲದಕ್ಕೂ ನಾವು ಒಪ್ಪಿಗೆ ಕೊಡಲಿಕ್ಕೆ ಆಗುವುದಿಲ್ಲ. ದಯಮಾಡಿ ನೀವು ಸರಿಯಾದ ರೀತಿಯಲ್ಲಿ ಮಾನ್ಯ ಶಾಸಕರಿಗೆ explain ಮಾಡಿ. ಇರುವ ಅಧಿಕಾರವನ್ನೆಲ್ಲಾ ತೆಗೆದುಕೊಂಡು ಹೋಗಿ ಅವರಿಗೆ ಕೊಟ್ಟುಬಿಟ್ಟರೆ ಆಗುವುದಿಲ್ಲ. ದಯಮಾಡಿ ನಾವು ಇದಕ್ಕೆ ಒಪ್ಪಿಗೆ

ಕೊಡುವುದಿಲ್ಲ. ಕೌನ್ಸಿಲಿಂಗ್ ಸಿಸ್ಟಮ್‌ಗೆ, ವರ್ಗಾವಣೆಗೆ ನಾವ್ಯಾರೂ ಒಪ್ಪಿಗೆ ಕೊಡುವುದಿಲ್ಲ.

(ಗೊಂದಲ)

ಶ್ರೀ ಕೆ.ಜಿ. ಕುಮಾರಸ್ವಾಮಿ : ಇದರಿಂದ ಸಾಕಷ್ಟು ತೊಂದರೆಯಾಗಿವೆ. ಕಾಲೇಜುಗಳಿಗೂ ಸರಿಯಾಗಿ ಯಾರೂ ಹೋಗುವುದಿಲ್ಲ. ಆಮೇಲೆ ನಮ್ಮ ಮಾತನ್ನು ಕೂಡ ಯಾರೂ ಕೇಳುವುದಿಲ್ಲ. ಈ ರೀತಿ ಸಮಸ್ಯೆ ಇದೆ. ಆ ಕಾರಣಕ್ಕಾಗಿ ದಯಮಾಡಿ ಇದನ್ನು ಮಾಡಬಾರದು.

(ಗೊಂದಲ)

ಶ್ರೀ ಕೆ.ಎಂ. ವಿರೂಪಾಕ್ಷಪ್ಪ : ಮಾನ್ಯ ಕಾನೂನು ಮಂತ್ರಿಗಳೆ ಇದಕ್ಕೆ ನಮ್ಮ ವಿರೋಧ ಇದೆ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ಮತ್ತು ವ್ಯವಹಾರಗಳ ಮತ್ತು ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಏನು ಈ ವಿಧೇಯಕವನ್ನು ತಂದಿದ್ದಾರೆ, ಇದರ ಮೂಲ ಉದ್ದೇಶವನ್ನು ಅರ್ಥಮಾಡಿಕೊಳ್ಳಬೇಕು. ಎಲ್ಲಾ ಕಡೆ ನಮ್ಮ ಶಾಸಕರು, ನಮ್ಮ ನಾಗರಿಕರು ಬಂದು ನಮ್ಮ ಕಡೆ ಶಿಕ್ಷಕರು ಇಲ್ಲ, ನಮ್ಮ ಕಡೆ ಡಾಕ್ಟರ್ಸ್ ಇಲ್ಲ ಎಂದು ಸಾಮಾನ್ಯವಾದ ದೂರು ಕೊಡುತ್ತಾರೆ. ಗ್ರಾಮೀಣ ಪ್ರದೇಶಕ್ಕೆ ಹೋಗಲಿಕ್ಕೆ ಯಾರೂ ಕೂಡ ತಯಾರು ಇಲ್ಲ. ಎಲ್ಲರಿಗೂ ಮೈಸೂರು ಬೇಕು, ಬೆಂಗಳೂರು ಬೇಕು, ಹುಬ್ಬಳ್ಳಿ ಬೇಕು ಇಂಥ ಒಂದು ದೊಡ್ಡ ಕೇಂದ್ರಗಳೇ ಬೇಕು. ಆದರೆ ನಮ್ಮ ಮಕ್ಕಳಿಗೆ, ನಮ್ಮ ಕಾಲೇಜು ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಲಿಕ್ಕೆ ಯಾವ ಟೀಚರ್ಸ್ ಒಪ್ಪುತ್ತಾರೆ? ಆ ಒಂದು ಘನವಾದ ಉದ್ದೇಶದಿಂದ ತಂದಿದ್ದೇವೆ ಹೊರತು ನಮ್ಮ ಪವರ್ಸ್ ಅನ್ನು ಯಾರಿಗೂ ಕೊಡುತ್ತಿಲ್ಲ. ಕೌನ್ಸಿಲಿಂಗ್, ಒಂದು ಸಿಸ್ಟಮ್ ತರುತ್ತಿದ್ದೇವೆ. ಈಗ ಪ್ರಶ್ನೆ ಇರುವುದು, ಆ ಟೀಚರ್ಸ್ ಇರುವುದು ಪಾಠ ಹೇಳಲಿಕ್ಕೋ ಅಥವಾ ಎಲ್ಲೋ ಹೋಗಿ ದಂಧೆ ಮಾಡಲಿಕ್ಕೋ?

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಆಯಿತು, ದಂಧೆ ಅಲ್ಲ. ಆ ಮಾತನ್ನು ವಾಪಸ್ಸು ತೆಗೆದುಕೊಂಡಿದ್ದೇನೆ. ಎಲ್ಲಾ ಕಡೆ ಕೂಡ ಶಿಕ್ಷಕರು ಇರಬೇಕು.

ಶ್ರೀ ಕೆ.ಎಂ. ವಿರೂಪಾಕ್ಷಪ್ಪ : ಮಾನ್ಯ ಅಧ್ಯಕ್ಷರೆ, ಕೌನ್ಸಿಲಿಂಗ್ ಸಿಸ್ಟಮ್ ಬೇಕಾಗಿಲ್ಲ.

ಶ್ರೀ ಕೆ.ಜಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಕಾನೂನು ಮಂತ್ರಿಗಳು ಹೇಳಿದರು, ಇದು ದಂಧೆ ಮಾಡುವಂಥದ್ದು ಮತ್ತೆ ಆಯಾಯ ಹಳ್ಳಿಗಳ ಶಿಕ್ಷಕರು ಅಲ್ಲಿಯೇ ಇರಬೇಕೆಂದು ಹೇಳುತ್ತಿದ್ದಾರೆ. ಆದರೆ ಸಿಟಿಯಲ್ಲಿರುವ ಶಿಕ್ಷಕರು ಅವರು ಅಲ್ಲಿಯೇ ಇರುತ್ತಾರೆ. ಯಾರೂ ಕೂಡ ಗ್ರಾಮಾಂತರ ಪ್ರದೇಶಗಳಿಗೆ ಹೋಗಲು ತಯಾರು ಇರುವುದಿಲ್ಲ. ಹಾಗಾಗಿ ನಾವು ಈ ಬಿಲ್ ಅನ್ನು ತರಬಾರದೆಂದು ವಿರೋಧ ಮಾಡುತ್ತೇವೆ.

ಶ್ರೀ ಕೆ.ಎಂ. ವಿರೂಪಾಕ್ಷಪ್ಪ : ಮಾನ್ಯ ಅಧ್ಯಕ್ಷರೆ, ಕೌನ್ಸಿಲಿಂಗ್ ಸಿಸ್ಟಮ್ ಬೇಕಾಗಿಲ್ಲ. ನಾವು ಇದನ್ನು ಒಪ್ಪುವುದಿಲ್ಲ. ನಮ್ಮ ವಿರೋಧ ಇದೆ. ಕೌನ್ಸಿಲಿಂಗ್ ಸಿಸ್ಟಮ್ ಬೇಡ ಸರ್.

ಅಧ್ಯಕ್ಷರು : ಗೂಳಿಹಟ್ಟಿ ಶೇಖರ್ ಮಾತನಾಡುತ್ತಾರೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಅಧ್ಯಕ್ಷರೆ, ಈಗಾಗಲೇ ಡಾಕ್ಟರ್ಸ್, ಬೇರೆ ಬೇರೆ ಕ್ಷೇತ್ರಗಳಲ್ಲಿ ಕೌನ್ಸಿಲಿಂಗ್ ಮಾಡಿ ಬಹಳಷ್ಟು ಅನ್ಯಾಯವಾಗಿದೆ. ಇದರಲ್ಲಿಯೂ ಕೂಡ ಯಾವುದೇ ಕಾರಣಕ್ಕೂ ಕೌನ್ಸಿಲಿಂಗ್ ಸಿಸ್ಟಮ್ ಬೇಡ. ದಯಮಾಡಿ ಇದನ್ನು ರದ್ದುಗೊಳಿಸಿ ಯಥಾಸ್ಥಿತಿಯನ್ನು ಮೊದಲು ಏನಿತ್ತು ಅದನ್ನು ಮುಂದುವರೆಸಬೇಕು.

(ಗೊಂದಲ)

ಶ್ರೀ ಕೆ.ಎಂ. ವಿರೂಪಾಕ್ಷಪ್ಪ : ಈಗಾಗಲೇ ನಮ್ಮಲ್ಲಿ ಒಂದು ಆಸ್ಪತ್ರೆಯಲ್ಲಿಯೂ ವೈದ್ಯರಿಲ್ಲ, ನರ್ಸ್‌ಗಳು ಇಲ್ಲ. ಇವರು ಕೌನ್ಸಿಲಿಂಗ್ ಇರುವುದರಿಂದ ಯಾರೂ ಗ್ರಾಮಾಂತರ ಪ್ರದೇಶಗಳ ಕಡೆ ಹೋಗುತ್ತಿಲ್ಲ. ಹಾಗಾಗಿ

ಯಾವುದೇ ಕಾರಣಕ್ಕೂ ಈ ರೀತಿಯಾದಂತಹ ಒಂದು amendment ತರಬಾರದು.

(ಗೊಂದಲ)

ಶ್ರೀ ಪಿ.ಟಿ. ರವಿ : ನಾನು ಒಂದು ನಿಮಿಷ ಮಾತನಾಡುತ್ತೇನೆ. .

(ಗೊಂದಲ)

ಅಧ್ಯಕ್ಷರು : ನೀವು ಆ ರೀತಿ ಹೇಳುವಂತಿಲ್ಲ. ಯಾವುದೂ ದಾಖಲೆಗೆ ಹೋಗುವುದಿಲ್ಲ. ಪ್ಲೀಸ್,

(ಗೊಂದಲ)

ಅಧ್ಯಕ್ಷರು : ಉತ್ತರ ಹೇಳಿ,

(ಗೊಂದಲ)

ಅಧ್ಯಕ್ಷರು : ನೀವು ಉತ್ತರ ಹೇಳುವುದಕ್ಕೂ ಬಿಡುವುದಿಲ್ಲ.

ಶ್ರೀ ಪಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು) : ಈಗ ಹೊಸದುರ್ಗದ ಗೂಳಿಹಟ್ಟಿ ಶೇಖರ್‌ರವರು, ಚನ್ನಗಿರಿ ವಿರೂಪಾಕ್ಷಪ್ಪನವರು, ಚಂದ್ರಣ್ಣನವರು ಅವರ ಕಾಲೇಜುಗಳಿಗೆ lecturer ಬೇಕು ಎಂದು ಕೇಳುತ್ತಾರೆ. ಬಹುತೇಕ ಜನ Lecturer ನಮಗೆ ವರ್ಗಾವಣೆ ಬೇಕು ಎಂದು ಶಿಫಾರಸ್ಸು ತರುವುದು, ಬೆಂಗಳೂರು, ಮೈಸೂರು, ಹುಬ್ಬಳ್ಳಿಗೆ. ನಾನು ಬೆಂಗಳೂರಿನ ಒಂದು ಕಾಲೇಜಿಗೆ ಹೋದೆ. 110 ಜನ permanent lecturers ಇದ್ದಾರೆ. Sanctioned posts 86 ಅದರಲ್ಲಿ 110 ಜನ ಇದ್ದಾರೆ. ಹುದ್ದೆಗಳ ಸಮೇತ ಅಲ್ಲಿಗೆ ಮುಖ್ಯಮಂತ್ರಿಗಳಿಂದ, ಮಂತ್ರಿಗಳಿಂದ ಆದೇಶ ಮಾಡಿಸಿಕೊಂಡು ವರ್ಗಾವಣೆಗೆ orders ಮಾಡಿಸಿಕೊಂಡು ಬಂದು ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ಅಲ್ಲಿ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ 900, ಶಿಕ್ಷಕರು 110, ಇನ್ನೊಂದು ಕಡೆ 2600 ಜನ students ಇದ್ದಾರೆ. ಶಿಕ್ಷಕರು 42 ಜನ ಇದ್ದಾರೆ. 2600 ಜನ ವಿದ್ಯಾರ್ಥಿಗಳು ಇರುವ ಗ್ರಾಮಾಂತರ ಪ್ರದೇಶಕ್ಕೆ 42 ಜನ ಶಿಕ್ಷಕರು ಇದ್ದಾರೆ. 900 ಜನ ವಿದ್ಯಾರ್ಥಿಗಳು ಇರುವ ಕಡೆ 110 ಜನ ಶಿಕ್ಷಕರು. Sanctioned posts ಗಿಂತ ಜಾಸ್ತಿ. ಹುದ್ದೆ ಸಮೇತ

ವರ್ಗಾವಣೆ ಮಾಡಿರುವುದು. ಇದರ ಉದ್ದೇಶ ನಮ್ಮ ಜವಾಬ್ದಾರಿಯಿಂದ ಮುಕ್ತರಾಗಬೇಕೆಂದು ಅಲ್ಲ. ಒಂದು system create ಮಾಡಬೇಕು. ಗ್ರಾಮಾಂತರ ಪ್ರದೇಶದ ಕಾಲೇಜುಗಳಲ್ಲಿ lecturers ಪ್ರಥಮ ಆದ್ಯತೆಯಲ್ಲಿ ಸಿಗುವ ಹಾಗೆ ಆಗಬೇಕು. ಗ್ರಾಮೀಣ ಮಕ್ಕಳಿಗೆ ಸಹಾಯವಾಗಬೇಕು. First appointment ಆಗಿರುವಂತಹವರು 'ಸಿ' ವಲಯದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡಿ ಅಲ್ಲಿ ಕನಿಷ್ಠ 8 ವರ್ಷ ಕೆಲಸ ಮಾಡಿದ ನಂತರ ಅವರು 'B' ವಲಯಕ್ಕೆ ಬರಬೇಕು. ಅಲ್ಲಿ 5 ವರ್ಷ ಕೆಲಸ ಮಾಡಿದ ಮೇಲೆ 'A' ವಲಯಕ್ಕೆ ಬರಬೇಕು. ಹೀಗೆ ಮಾಡಿದ್ದೇನೆ. ಹೀಗೆ ಮಾಡಿರುವುದು ಇವರಿಗೆ ಇಷ್ಟವಿಲ್ಲವೆಂದು ಇವರು ಹೇಳುವುದಾದರೆ ನಾನು ಈ ಬಿಲ್ ಹಿಂಪಡೆಯುವುದಕ್ಕೆ ತಯಾರಿದೇನೆ. ಅಧ್ಯಕ್ಷರೆ, ಈಗ ಕೌನ್ಸಿಲಿಂಗ್ ಇಲ್ಲದೇ ಇದ್ದರೂ ಸಹ ಈ system ನಲ್ಲೇ transfer ಮಾಡಬಹುದು.

(ಗೊಂದಲ)

ಶ್ರೀ ಡಿ.ಎನ್. ಜೀವ್‌ರಾಜ್ : ಮಾನ್ಯ ಅಧ್ಯಕ್ಷರೆ, ಈಗ ಉನ್ನತ ಶಿಕ್ಷಣ ಸಚಿವರು ತಂದಿರುವಂತಹ ಬಿಲ್ಲಿನಲ್ಲಿ...

(ಗೊಂದಲ)

ಶ್ರೀ ಡಿ.ಎನ್. ಜೀವ್‌ರಾಜ್ : ಇದನ್ನು ಜಾರಿ ಮಾಡಬೇಕು. ಇಲ್ಲದೇ ಹೋದರೆ ಗ್ರಾಮೀಣ ಪ್ರದೇಶದಲ್ಲಿರುವ ಜನರಿಗೆ ತೊಂದರೆಯಾಗುತ್ತದೆ. ಅವರಿಗೂ ಆ ಸಮಸ್ಯೆ ಬಗ್ಗೆ ಗೊತ್ತಿದೆ.

(ಗೊಂದಲ)

ಅಧ್ಯಕ್ಷರು : ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2012ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಈ ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಅಧ್ಯಕ್ಷರು : ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.

ಖಂಡ 2 ರಿಂದ 18 ರವರೆಗೆ

ಅಧ್ಯಕ್ಷರು : 2 ರಿಂದ 18ರವರೆಗಿನ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು"ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

2 ರಿಂದ 18ರವರೆಗಿನ ಖಂಡಗಳು ವಿಧೇಯಕದ ಅಂಗವಾದವು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 18 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು : ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂಬುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಯನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು) :– ಮಾನ್ಯ ಅಧ್ಯಕ್ಷರೆ, 2012ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಗಿದೆ.
ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

2012ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.
(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು)

(ಅನುಬಂಧ–13)

11. ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ವಿಧೇಯಕ, 2012

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು, ಮಾನವ ಹಕ್ಕು, ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ, ಬೆಂಗಳೂರು ಜಲಮಂಡಳಿ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) :– ಮಾನ್ಯ ಅಧ್ಯಕ್ಷರೆ, 2012ನೇ ಸಾಲಿನ ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು, ಮಾನವ ಹಕ್ಕು, ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ, ಬೆಂಗಳೂರು ಜಲಮಂಡಳಿ ಸಚಿವರು) : ಮಾನ್ಯ ಅಧ್ಯಕ್ಷರೆ, ಕಳೆದ ಅನೇಕ ವರ್ಷಗಳಿಂದ ಸುಮಾರು 17,000 ರೂ. ಗಳಿಗೂ ಮಿಕ್ಕಿ ದಿನಗೂಲಿ ನೌಕರರು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ವಿಶೇಷವಾಗಿ 2000 ಮತ್ತು 2006ನೇ ಇಸವಿಯಲ್ಲಿ ಬಂದ ಉಮಾದೇವಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ತೀರ್ಪನ್ನು ಕೊಟ್ಟ ನಂತರ ಇವರ್ಯಾರನ್ನೂ ಕೂಡ regularize ಮಾಡುವುದಕ್ಕೆ ಅವಕಾಶವಿರಲಿಲ್ಲ. ಅವರುಗಳನ್ನು regularize ಮಾಡಬೇಕೆಂಬ ಬೇಡಿಕೆ ಎಲ್ಲಾ ಕಡೆಯಿಂದ ಇದೆ. ಅತ್ಯಂತ ಕಡಿಮೆ ಸಂಬಳ ಬರುತ್ತಿದೆ. ನಮ್ಮ ಸರ್ಕಾರ ಬಂದ ನಂತರ ಅವರುಗಳಿಗೆ ಎರಡು ಬಾರಿ ಒಂದೊಂದು ಸಾವಿರ ರೂ.ಗಳ ಸಂಬಳವನ್ನು ಹೆಚ್ಚು ಮಾಡಿದ್ದೇವೆ.